**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಹರೀಶ್ ಕುಮಾರ್, ಇವರು ಪ್ರಸ್ತಾಪಿಸಿರುವ ಶೂನ್ಯವೇಳೆ ಸೂಚನೆಗೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ**

ಪ್ರಶ್ನೆ:

ರಾಜ್ಯ ಸರ್ಕಾರದ ಮಹತ್ವದ 'ಶಕ್ತಿ ಯೋಜನೆ' ಜಾರಿಯಾದ ನಂತರ ಶಕ್ತಿ ಯೋಜನೆಯಡಿ ಸಂಚರಿಸಿದವರ ಸಂಖ್ಯೆ ನೂರು ಕೋಟಿ ತಲುಪಿರುವುದು ಹೆಮ್ಮೆಯ ಸಂಗತಿಯಾಗಿದ್ದರೂ ಮಕ್ಕಳ ಶೈಕ್ಷಣಿಕ ಪ್ರವಾಸಕ್ಕೆ ಬಸ್ ಇಲ್ಲದಿರುವ ಕುರಿತು ಪತ್ರಿಕೆಯಲ್ಲಿ ವರದಿಯಾಗಿರುವುದು ಕಳವಳಕಾರಿ ವಿಷಯವಾಗಿರುತ್ತದೆ.

ರಾಜ್ಯದಲ್ಲಿ ಶಕ್ತಿ ಯೋಜನೆಯಡಿ ಪ್ರಯಾಣಿಸುವವರ ಸಂಖ್ಯೆ ದುಪ್ಪಟ್ಟಾದ ತರುವಾಯ ಸಾರಿಗೆ ಸಂಸ್ಥೆಗಳಲ್ಲಿ ಬಸ್ ಕೊರತೆ ಹೆಚ್ಚಾಗಿ ಸಾರಿಗೆ ನಿಗಮಗಳು ಸಾಮಾನ್ಯ ಪ್ರಯಾಣಿಕರಿಗೆ ಬಸ್ ಸೌಕರ್ಯ ಒದಗಿಸಲು ಕಷ್ಟಸಾಧ್ಯವಾಗಿರುವ ನಡುವೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸೇರಿ ವಿವಿಧ ಸಾರಿಗೆ ನಿಗಮಗಳು ಮಕ್ಕಳ ಶೈಕ್ಷಣಿಕ ಪ್ರವಾಸಕ್ಕೆ ಬಸ್ ಕೊಡಲು ಹಿಂದೇಟು ಹಾಕುತ್ತಿದ್ದು ಇದರಿಂದ ಮಕ್ಕಳ ಶೈಕ್ಷಣಿಕ ಪ್ರವಾಸಕ್ಕೆ ಬಸ್ ಇಲ್ಲದಿರುವುದು ಆತಂಕದ ವಿಚಾರವಾಗಿರುತ್ತದೆ.

ಮಕ್ಕಳ ಸುರಕ್ಷತೆ ಮತ್ತು ಪ್ರಯಾಣದ ವೆಚ್ಚ ಕಡಿಮೆಯಾಗುವ ದೃಷ್ಟಿಯಿಂದ ಶೈಕ್ಷಣಿಕ ಪ್ರವಾಸಕ್ಕೆ ಸರಕಾರಿ ಬಸ್‌ಗಳನ್ನೆ ಬಳಸಬೇಕು ಎಂಬ ಶಿಕ್ಷಣ ಇಲಾಖೆಯ ನಿಯಮ ಒಂದು ಕಡೆ ಇದ್ದು, ಸಾಮಾನ್ಯ ಪ್ರಯಾಣಿಕರಿಗೆ ಬಸ್ ಸೌಕರ್ಯ ಕಲ್ಪಿಸುವುದೇ ದುಸ್ತರವಾಗಿರುವ ಸಂಗತಿ ಇನ್ನೊಂದಡೆ ಸಾರಿಗೆ ನಿಗಮಗಳ ಮುಂದಿರುತ್ತದೆ. ಆದಾಗ್ಯೂ ಮಕ್ಕಳ ಅಧ್ಯಯನ ಪ್ರವಾಸಗಳಿಗೆ ತೊಂದರೆಯಾಗದಂತೆ ಅಗತ್ಯವಿರುವ ಬಸ್‌ಗಳನ್ನು ಒದಗಿಸಲು ಆಯಾ ನಿಗಮಗಳಿಗೆ ಸೂಚನೆ ನೀಡಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರನ್ನು ಒತ್ತಾಯಿಸುತ್ತೇನೆ.

ಉತ್ತರ:

**ಕ.ರಾ.ರ.ಸಾ ನಿಗಮ:-**

ನಿಗಮದಿಂದ ಕಳೆದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ ಮತ್ತು 07 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.

ನಿಗಮದಲ್ಲಿ 7574 ಅನುಸೂಚಿಗಳಿಂದ 46954 ಟ್ರಿಪ್‌ಗಳ ಕಾರ್ಯಾಚರಣೆಯನ್ನು ಮಾಡಲಾಗುತ್ತಿದೆ. ನಿಗಮದ ವ್ಯಾಪ್ತಿಯಲ್ಲಿ ಒಟ್ಟು 21670 ಗ್ರಾಮಗಳು ಇದ್ದು, ಇದರಲ್ಲಿ 19531 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ ಹಾಗೂ 2139 ಗ್ರಾಮಗಳ ಸಮೀಪದ ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಬಸ್ಸುಗಳನ್ನು ಖರೀದಿಸುವ / ಜಿ.ಸಿ.ಸಿ ಆಧಾರದ ಮೇಲೆ ಕಾರ್ಯಾಚರಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ:

- ಸರ್ಕಾರದಿಂದ ನಿಗಮಕ್ಕೆ ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ರೂ.100.00 ಕೋಟಿಗಳ ಅನುದಾನದಲ್ಲಿ ಕರ್ನಾಟಕ ಸಾರಿಗೆ ಸಾಮಾನ್ಯ ಮಾದರಿಯ ಒಟ್ಟು 250 ಸಂಖ್ಯೆ ಹೊಸ ವಾಹನಗಳನ್ನು ಖರೀದಿಸಲು

ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ.6235.44 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

- 25 ಹೊಸ ಸಾಮಾನ್ಯ ಕರ್ನಾಟಕ ಸಾರಿಗೆ ಮಾದರಿ ವಾಹನಗಳನ್ನು ಡಿಸೆಂಬರ್-23ರ ಅಂತ್ಯದೊಳಗೆ ಸೇರ್ಪಡೆಗೊಳಿಸಲು ಕ್ರಮ ಜರುಗಿಸಲಾಗಿದೆ.
- 100 ಹೊಸ ಸಾಮಾನ್ಯ ಬಸ್ಸುಗಳನ್ನು ಖರೀದಿಸಲು ಸರಬರಾಜು ಆದೇಶ ನೀಡಿದ್ದು, ಈ ಪೈಕಿ 90 ಬಸ್ಸುಗಳು ಸರಬರಾಜಾಗಿರುತ್ತದೆ.
- 200 ಹೊಸ ಸಾಮಾನ್ಯ ಬಸ್ಸುಗಳನ್ನು ಖರೀದಿಸಲು ಸರಬರಾಜು ಆದೇಶ ನೀಡಲಾಗಿದೆ.
- 40 ಪಲ್ಲಕ್ಕಿ ನಾನ್-ಎ.ಸಿ. ಸ್ಲೀಪರ್ ಬಸ್ಸುಗಳನ್ನು ಖರೀದಿಸಲಾಗಿದೆ.
- 04 ಎ.ಸಿ. ಮತ್ತು 04 ನಾನ್-ಎ.ಸಿ. ಸ್ಲೀಪರ್ ಬಸ್ಸುಗಳನ್ನು ಖರೀದಿಸಲಾಗಿದೆ.
- 300 ಸಂಖ್ಯೆ ವಿದ್ಯುತ್ ಚಾಲಿತ ವಾಹನಗಳನ್ನು ಜಿ.ಸಿ.ಸಿ ಆಧಾರದಲ್ಲಿ ಕಾರ್ಯಾಚರಣೆಗೊಳಿಸಲು ಕ್ರಮ ಜರುಗಿಸಲಾಗುತ್ತಿದ್ದು ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.
- 350 ಸಂಖ್ಯೆ ಸಾಮಾನ್ಯ ಬಸ್ಸುಗಳನ್ನು ಖರೀದಿಸಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

ನಿಗಮದಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆ ಹಾಗೂ 300 ತಾಂತ್ರಿಕ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.

ಅಲ್ಲದೇ, ನಿಗಮದಲ್ಲಿ 1239 ಹೊರಗುತ್ತಿಗೆ ಚಾಲಕರು ಕಾರ್ಯನಿರ್ವಹಿಸುತ್ತಿರುತ್ತಾರೆ.

ಪ್ರಸ್ತುತ, ಕಲ್ಪಿಸುತ್ತಿರುವ ಸಾರಿಗೆಗಳು ಗ್ರಾಮೀಣ ಭಾಗದ ಶಾಲಾ/ ಕಾಲೇಜು ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಇರುತ್ತದೆ. ಅದಾಗ್ಯೂ, ಹೆಚ್ಚುವರಿ ಬೇಡಿಕೆ ಬಂದಲ್ಲಿ, ಬೇಡಿಕೆಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಕ್ರೂಢೀಕರಿಸಿಕೊಂಡು ಮಾರ್ಗ ಸಮೀಕ್ಷೆ ಕೈಗೊಂಡು ಪರಿಶೀಲಿಸಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**<u>ಬೆಂ.ಮ.ಸಾ.ಸಂಸ್ಥೆ:-</u>**

ಸಂಸ್ಥೆಯಿಂದ ಕಳೆದ 05 ವರ್ಷಗಳಲ್ಲಿ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.

ಸಂಸ್ಥೆಯ ಕಾರ್ಯಾಚರಣೆ ವ್ಯಾಪ್ತಿಗೆ ಒಳಪಡುವ ಹಾಗೂ ಬಸ್ಸುಗಳ ಸಂಚಾರಕ್ಕೆ ಸೂಕ್ತ ರಸ್ತೆಗಳಿರುವ ಎಲ್ಲಾ ಪ್ರದೇಶಗಳಿಗೂ ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ.

ಪ್ರಸ್ತುತ ಸಂಸ್ಥೆಯಿಂದ ಪ್ರಯಾಣಿಕರ/ ನೌಕರರ ಅನುಕೂಲಕ್ಕಾಗಿ ಸಂಚಾರ ದಟ್ಟಣೆಗನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ಪ್ರಯಾಣಿಕರ / ವಿದ್ಯಾರ್ಥಿ ಸಮುದಾಯ ವರ್ಗದವರಿಗೆ ಸಾರಿಗೆ ಸೌಲಭ್ಯ ನೀಡುವಲ್ಲಿ ಯಾವುದೇ ತೊಂದರೆ / ಸಮಸ್ಯೆ ಉಂಟಾಗಿರುವುದಿಲ್ಲ ಹಾಗೂ ಕಳೆದ ನಾಲ್ಕು ತಿಂಗಳುಗಳಲ್ಲಿ ಸಂಸ್ಥೆಯಿಂದ 677 ಸುತ್ತುವಳಿಗಳನ್ನು ಹೆಚ್ಚಿಸಿ ಕಾರ್ಯಾಚರಣೆಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಬಸ್ಸುಗಳನ್ನು ಖರೀದಿಸಲು ಪ್ರಕ್ರಿಯೆ ಜಾರಿಯಲ್ಲಿರುತ್ತದೆ:

- 840 ಬಿ.ಎಸ್-6 ಡೀಸೆಲ್ ಬಸ್
- 921 ಎಲೆಕ್ಟ್ರಿಕ್ ಬಸ್(ಜಿಸಿಸಿ)
- 100 ಫೀಡರ್ ಸರ್ವಿಸ್ (ಜಿಸಿಸಿ)
- 20 ಚಿಕ್ಕ ಬಸ್ (ಫೀಡರ್ ಸರ್ವಿಸ್)
- 05 ಡಬಲ್ ಡೆಕ್ಕರ್ ಬಸ್ ಹವಾನಿಯಂತ್ರಿತ (NCAP)
- 05 ಡಬಲ್ ಡೆಕ್ಕರ್ ಬಸ್ ಹವಾನಿಯಂತ್ರಿತ (DULT)
- ಸರ್ಕಾರದಿಂದ ಸಂಸ್ಥೆಗೆ ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ರೂ.150.00 ಕೋಟಿಗಳ ಅನುದಾನದಲ್ಲಿ 320 ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್‌ಗಳನ್ನು ಕಾರ್ಯಾಚರಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ. 9353.16 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಸಂಸ್ಥೆಯಲ್ಲಿ 2023-24ನೇ ಸಾಲಿನ ಕಾರ್ಯಯೋಜನೆಯನ್ವಯ ಪ್ರಸ್ತುತ 2500 ನಿರ್ವಾಹಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಜಾಹೀರಾತು ಹೊರಡಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

**ವಾ.ಕ.ರ.ಸಾ.ಸಂಸ್ಥೆ:**

ಸಂಸ್ಥೆಯಿಂದ ಕಳೆದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ ಮತ್ತು 07 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.

ಸಂಸ್ಥೆಯ ವ್ಯಾಪ್ತಿಯ 6 ಜಿಲ್ಲೆಗಳಲ್ಲಿ 9 ವಿಭಾಗದ 55 ಘಟಕಗಳಿಂದ 4583 ಅನುಸೂಚಿಗಳಿಂದ 35790 ಸರತಿಗಳನ್ನು ಕಾರ್ಯಾಚರಿಸಲಾಗುತ್ತಿದೆ. ಇದರಲ್ಲಿ ಗ್ರಾಮೀಣ ಭಾಗದಲ್ಲಿ 3517 ಅನುಸೂಚಿಗಳಿಂದ 28221 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಸಂಸ್ಥೆಯಲ್ಲಿನ ಲಭ್ಯವಿರುವ ಸಂಪನ್ಮೂಲಗಳಿಂದ 28 ಅನುಸೂಚಿಗಳನ್ನು ಹೆಚ್ಚಿಸುವುದಲ್ಲದೇ ಜೂನ್-2023ರ ನಂತರದ ಅವಧಿಯಲ್ಲಿ 124 ಅಂತರರಾಜ್ಯ ಸಾರಿಗೆಗಳನ್ನು ಸ್ಥಗಿತಗೊಳಿಸಿ, ಸದರಿ ವಾಹನಗಳನ್ನೂ ಸಹ ರಾಜ್ಯದೊಳಗೆ ಕಾರ್ಯಾಚರಣೆಗೆ ಬಳಸಿಕೊಂಡು ಒಟ್ಟಾರೆ 1114 ಸರತಿಗಳನ್ನು ಹೆಚ್ಚಿಸಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಾಹನಗಳ ಕಾರ್ಯಾಚರಣೆಗೆ ಕ್ರಮವಹಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಸಾರಿಗೆ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ.:-

- 50 ಗ್ರಾಮಾಂತರ ಸಾರಿಗೆ ವಾಹನಗಳನ್ನು ಖರೀದಿಸಲಾಗಿದೆ.
- ಗ್ರಾಮಾಂತರ ಸಾರಿಗೆಯ 285 ಹೊಸ ವಾಹನಗಳ ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
- ಸರ್ಕಾರದಿಂದ ಸಂಸ್ಥೆಗೆ ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ರೂ.150.00 ಕೋಟಿಗಳ ಅನುದಾನ ಸುಮಾರು 375 ಸಂಖ್ಯೆ ಗ್ರಾಮಾಂತರ ಸಾರಿಗೆಗಳನ್ನು

ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ.9353.16 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

- ಡಲ್ಟ್ ಆರ್ಥಿಕ ಸಹಾಯದಿಂದ 100 ನಗರ ಸಾರಿಗೆ ಬಸ್ಸುಗಳ ಖರೀದಿ ಪ್ರಕ್ರಿಯೆ ಸಹ ಜಾರಿಯಲ್ಲಿರುತ್ತದೆ.
- 20-ನಾನ್ ಎ/ಸಿ ಸ್ಲೀಪರ್ ಹಾಗೂ 04-ಎ/ಸಿ ಸ್ಲೀಪರ್ ವಾಹನಗಳ ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಸಂಸ್ಥೆಯಲ್ಲಿ ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.

ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿ ಪೂರ್ಣಗೊಳಿಸಲು ಸಾಕಷ್ಟು ಕಾಲಾವಕಾಶ ಬೇಕಾಗುವುದರಿಂದ ತಾತ್ಕಾಲಿಕವಾಗಿ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಪ್ರಸ್ತುತ ಅವಶ್ಯಕತೆಯನ್ನು ಆಧರಿಸಿ 100 ಚಾಲಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ. ಮುಂದಿನ ಹಂತದಲ್ಲಿ 180 ಚಾಲಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಕ್ರಮ ಜಾರಿಯಲ್ಲಿರುತ್ತದೆ.

**ಕ.ಕ.ರ.ಸಾ.ನಿಗಮ:-**

ನಿಗಮದಿಂದ ಕಳೆದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ ಮತ್ತು 07 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.

ನಿಗಮದ ವ್ಯಾಪ್ತಿಯ ಒಟ್ಟು 5283 ಜನವಸತಿ ಗ್ರಾಮಗಳ ಪೈಕಿ 5240 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಉಳಿದ 43 ಗ್ರಾಮಗಳ ಸಮೀಪದ ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಸಾರಿಗೆ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ.:-

- ಸರ್ಕಾರದಿಂದ ನಿಗಮಕ್ಕೆ ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ರೂ.100.00 ಕೋಟಿಗಳ ಅನುದಾನದಲ್ಲಿ ಪೂರ್ಣ ಕವಚ ನಿರ್ಮಿತ 250 ವೇಗದೂತ ಸಾರಿಗೆಗಳನ್ನು ಖರೀದಿಸಲು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ.6235.44 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
- ಪೂರ್ಣ ಕವಚ ನಿರ್ಮಿತ 93 ನಗರ ಸಾರಿಗೆ ಬಸ್ಸುಗಳನ್ನು ಡಲ್ಟ್ ಆರ್ಥಿಕ ಸಹಾಯದಿಂದ ಖರೀದಿಸಲು ಮಂಜೂರಾತಿ ದೊರೆತಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ನಿಗಮದಲ್ಲಿ 925-ಚಾಲಕ ಹುದ್ದೆ ಮತ್ತು 694-ಚಾಲಕ-ಕಂ-ನಿರ್ವಾಹಕ ಹುದ್ದೆಗಳ ಸೇರಿದಂತೆ 16-ಸಹಾಯಕ ಲೆಕ್ಕಿಗ ಮತ್ತು 300-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮತ್ತು 59 ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದ್ದು, ಜನವರಿ 2024ರ ಒಳಗಾಗಿ ನೇಮಕಾತಿ ಪ್ರಕ್ರಿಯೆಗಳನ್ನು ಮುಕ್ತಾಯಗೊಳಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ಕ್ರಮ ವಹಿಸಲಾಗುವುದು.

15-ಸಹಾಯಕ ಲೆಕ್ಕಿಗ ಮತ್ತು 300-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮತ್ತು 59 ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ಬಾಕಿ ಇದ್ದ 36 ಹಿಂಬಾಕಿ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಶಕ್ತಿ ಯೋಜನೆಯಿಂದಾಗಿ ಬಸ್‌ಗಳ ಕೊರತೆಯಿಂದ ಶಾಲಾ ಮಕ್ಕಳು ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಹಿನ್ನಡೆಯುಂಟಾಗುತ್ತಿರುವುದಾಗಿ ಈವರೆಗೆ ಯಾವುದೇ ದೂರು/ಆಕ್ಷೇಪಗಳು ಸ್ವೀಕೃತವಾಗಿರುವುದಿಲ್ಲ. ಶೈಕ್ಷಣಿಕ ಇಲಾಖೆ/ಶಾಲಾ-ಕಾಲೇಜುಗಳಿಂದ ಬರುವ ಬೇಡಿಕೆ/ಮನವಿಗಳಿಗೆ ಅನುಗುಣವಾಗಿ, ಸಂಸ್ಥೆಯಲ್ಲಿ ಲಭ್ಯವಿರುವ ವಾಹನಗಳನ್ನು ಬಳಸಿಕೊಂಡು ಶಿಕ್ಷಣ ಇಲಾಖೆಯ ಸಮನ್ವಯದೊಂದಿಗೆ ಶೈಕ್ಷಣಿಕ ಪ್ರವಾಸಕ್ಕಾಗಿ ಬಸ್‌ಗಳನ್ನು ಒದಗಿಸಲು ಕ್ರಮ ವಹಿಸಲಾಗುತ್ತಿದೆ.

ಮುಂಬರುವ ದಿನಗಳಲ್ಲಿ ವಾಹನಗಳ ಮತ್ತು ಚಾಲನಾ ಸಿಬ್ಬಂದಿಗಳ ಲಭ್ಯತೆಗನುಗುಣವಾಗಿ ಬೇಡಿಕೆ ಮತ್ತು ಅವಶ್ಯಕತೆಗಳನಸಾರ ಮಕ್ಕಳ ಶೈಕ್ಷಣಿಕ ಪ್ರವಾಸ ಹಾಗೂ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅನುಸೂಚಿಗಳನ್ನು ಹೆಚ್ಚಿಸಲು ಸೂಚನೆ ನೀಡಲಾಗುವುದು.

ಸಂಖ್ಯೆ: ಟಿಡಿ 230 ಟಿಸಿಕ್ಯೂ 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು